

# ಮಳೆ ಸುರಿದು ಹೋಗಿದೆ

★ ಚಿತ್ರ -ಲೇಖನ: ಗ. ಮ. ತುಂಬೇಮನೆ

'ಅಜ್ಜಾ, ಮಳೆಗಾಲ ಯಾವಾಗ ಪ್ರಾರಂಭವಾಗುತ್ತದೆ' ಎಂದು ಕೇಳಿದಾಗ, 'ಮಿಂಚು ಹುಳುಗಳು ಮರದ ತುದಿ ಏರಿದೊಡನೆ ಶುರುವಾಗುತ್ತದೆ' ಎಂದು ಅಜ್ಜ ಮಾನ್ಸೂನ್ ಮುನ್ಸೂಚನೆ ಕೊಡುತ್ತಿದ್ದರು! ನಮಗೆ ದಿನಾಲೂ ಸಾಯಂಕಾಲ ಮಿಂಚು ಹುಳುಗಳ ಚಲನೆ ವೀಕ್ಷಿಸುವುದು ಕುತೂಹಲದ ವಿಷಯವಾಗಿತ್ತು. ಮರದ ತುದಿಯನೇರಿದ ಮಿಂಚು ಹುಳುಗಳು ಮಳೆಗಾಲ ಪ್ರಾರಂಭವಾದೊಡನೆ ಮಾಯವಾಗಿಬಿಡುತ್ತಿದ್ದವು. ಮತ್ತೆ ಮುಂದಿನ ವರ್ಷದ ಮೇ ತಿಂಗಳ ಕೊನೆಯಲ್ಲಿ ಮರ ಗಿಡಗಳ ಬುಡದಲ್ಲಿ ಕಾಣಿಸಿಕೊಳ್ಳುತ್ತಿದ್ದವು.

ಪ್ರಕೃತಿಯೊಡನೆ ಬಾಳುವ ಮಲೆನಾಡ ಹಳ್ಳಿಗರು ಸುತ್ತಲಿನ ಮರಗಿಡಗಳ, ಪ್ರಾಣಿ– ಪಕ್ಷಿಗಳಲ್ಲಿನ ಬದಲಾವಣೆ ನೋಡಿಕೊಂಡೇ ಮಳೆಗಾಲದ ತಯಾರಿ ಮಾಡಿಕೊಳ್ಳುತ್ತಾರೆ. ಮರಗಳನ್ನು ಆಶ್ರಯಿಸಿ ಹೂ ಬಿಡುವ ಸೀತೆ ದಂಡೆ,

– 8ನೇ ಪುಟಕ್ಕೆ

